# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದಿಂದ (ಕೆಎಸ್ಐಐಡಿಸಿ) ಹೊಸ ಒಂದಾವರ್ತಿ ಸಾಲ ತೀರುವಳಿ ನೀತಿ-2019ನ್ನು (New One Time Settlement Poliy-2019) ಜಾರಿಗೊಳಿಸಲು ಅನುಮೋದನೆ ನೀಡುವ ಬಗ್ಗೆ.

ದಲಾಗಿದೆ: 1) ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ ಇವರ ಪತ್ರ ಸಂಖ್ಯೆ: ಡಿಜಿಎಂ(ಆರ್) /867/ 2019-20, ದಿನಾಂಕ; 31.10.2019.

2) ವ್ಯವಸ್ಥಾಪಕ ನಿರ್ದೇಶಕರು. ಕೆ.ಎಸ್.ಐ.ಐ.ಡಿ.ಸಿ ಇವರ ಪತ್ರ ಸಂಖ್ಯೆ: ಡಿಜಿಎಂ (ಆರ್)/ 1307/2019-20, ದಿನಾಂಕ: 27.01.2020.

******

ಪ್ರಸ್ತಾವನ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (2)ರ ಪತ್ರಗಳಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತವು ಪ್ರಸ್ತುತ ಹೊಸ ಒಂದಾವರ್ತಿ ಸಾಲ ತೀರುವಳಿ ನೀತಿ-2019ಅನ್ನು ಜಾರಿಗೊಳಿಸಲು ಪ್ರಸ್ತಾಪಿಸಿದ್ದು , ಕೆಎಸ್ಐಐಡಿಸಿಯು 2002 ರಲ್ಲಿ ಸಾಲ ನೀಡುವಿಕೆ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದ್ದು, ಆನಂತರದಲ್ಲಿ ಅನುತ್ಪಾದಕ ಸಾಲದ ಘಟಕಗಳಿಂದ (Non Performing Assets) ಸಾಲದ ಬಾಕಿಗಳನ್ನು ವಸೂಲಿ ಮಾಡಲು ಹೆಚ್ಚಿನ ಗಮನವನ್ನು ಕೇಂದ್ರೀಕರಿಸಿ 2002-03ರ ಸಾಲಿನಲ್ಲಿ ಮೊದಲ ಬಾರಿಗೆ ಓಟಿಎಸ್ ನೀತಿಯನ್ನು ಜಾರಿಗೆ ತಂದಿರುತ್ತದೆ. ಸದರಿ ನೀತಿಯು ಹಲವಾರು ತಿದ್ದುಪಡಿಗಳು/ವಿಸ್ತರಣೆಗಳೊಂದಿಗೆ ಮಾರ್ಚ್-2018ರವರೆಗೆ ಮುಂದುವರೆದಿರುತ್ತದೆ.

2. ದಿನಾಂಕ 31.03.2019 ಸ್ಥಿತಿಗೆ ಅನುಸಾರ ಕೆ.ಎಸ್.ಐ.ಐ.ಡಿ.ಸಿ.ಯಲ್ಲಿ ಅಸಲು ಬಾಕಿ ವಸೂಲಾತಿ ಪ್ರಕರಣಗಳಿಂದ ತಾರತಮ್ಯ ರಹಿತ ಮತ್ತು ಪರಸ್ಪರ ಲಾಭದಾಯಕ ವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ ವಸೂಲಾತಿ ಪ್ರಕ್ರಿಯೆಯನ್ನು ವೇಗಗೊಳಿಸುವುದು ಪ್ರಸ್ತಾವಿತ ಓಟಿಎಸ್ ನೀತಿ-2019ರ ಗುರಿಯಾಗಿರುತ್ತದೆ. ಹೊಸ ಓಟಿಎಸ್ ನೀತಿಯನ್ನು ಜಾರಿಗೊಳಿಸಲು ಸಾಲದ ಖಾತೆಗಳು ಅನುತ್ಪಾದಕವಾಗಿರುವುದು, ಖಾತ್ರಿದಾರರ ವಿಳಾಸವನ್ನು ಗುರುತಿಸಲು ಸಾಧ್ಯವಾಗದಿರುವುದು, ನ್ಯಾಯಾಲಯದಲ್ಲಿನ ವ್ಯಾಜ್ಯಗಳು ಪೂರ್ಣಗೊಳ್ಳಲು ವಿಳಂವಾಗುವುದು, ಇತ್ಯಾದಿ ಕಾರಣಗಳನ್ನು ಉಲ್ಲೇಖಿಸಿ, ಪ್ರಸ್ತುತ ಹೊಸ ಒಂದಾವರ್ತಿ ಸಾಲ ತೀರುವಳಿ ನೀತಿ-2019ನ್ನು ಜಾರಿಗೆ ತಂದಲ್ಲಿ, ನಿಗಮದಲ್ಲಿ ಬಾಕಿ ಉಳಿದಿರುವ 251 ಸಾಲದ ಖಾತೆಗಳಲ್ಲಿನ ರೂ. 233 ಕೋಟಿ ಅಸಲನ್ನು ವಸೂಲಿ ಮಾಡಲು ಸಾಧ್ಯವಾಗುವುದೆಂದು ಸಮರ್ಥಿಸಿದೆ.

3. ಈ ಹಿನ್ನೆಲೆಯಲ್ಲಿ ದಿನಾಂಕ: 27ನೇ ಸೆಪ್ಟೆಂಬರ್ 2019 ರಂದು ನಡೆದ 526ನೇ ಕೆ.ಎಸ್.ಐ.ಐ.ಡಿ.ಸಿಯ ಮಂಡಳಿಯ ಸಭೆಯಲ್ಲಿ ಈ ಬಗ್ಗೆ ವಿವರವಾಗಿ ಚರ್ಚಿಸಿದ ನಂತರ ಎಂ.ಸಿ.ಎ.ಆರ್. ಓಟಿಎಸ್ ಯೋಜನೆಯನ್ನು ಗಮನದಲ್ಲಿರಿಸಿ ಸದರಿ ನೀತಿಯನ್ನು ಸಿದ್ಧಪಡಿಸಲಾಗಿರುವ ಹಿನ್ನೆಲೆಯಲ್ಲಿ ಹೊಸ ಓಟಿಎಸ್ ನೀತಿ-2019ನ್ನು ಜಾರಿಗೊಳಿಸಲು ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ. ಮೂಅಇ 116 ಮೂಇವಿ 2019,**
**ಬೆಂಗಳೂರು, ದಿನಾಂಕ:21.03.2020**

1. ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆ.ಎಸ್.ಐ.ಐ.ಡಿ.ಸಿ) ಸಲ್ಲಿಸಿರುವ ಹೊಸ ಒಂದಾವರ್ತಿ ಸಾಲ ತೀರುವಳಿ ನೀತಿ–2019ನ್ನು ಅನುಬಂಧದಲ್ಲಿರುವಂತೆ (New One Time Settlement Poliy-2019) ಜಾರಿಗೊಳಿಸಲು ಸರ್ಕಾರದ ಅನುಮೋದನೆಯನ್ನು ನೀಡಿದೆ.

2. ಹೊಸ ಒಂದಾವರ್ತಿ ಸಾಲ ತೀರುವಳಿ ನೀತಿ–2019 ಅಡಿಯಲ್ಲಿ ಪರಿಗಣನೆಗೆ ಬರುವ ಎಲ್ಲಾ ಪ್ರಸ್ತಾವನೆಗಳನ್ನು ಓಟಿಎಸ್ ನೀತಿಯಲ್ಲಿ ನಿಗದಿಪಡಿಸಿರುವಂತಹ ಸೂತ್ರಗಳಿಗೆ ಅನುಗುಣವಾಗಿ ಪ್ರಸ್ತಾವನೆಗಳನ್ನು ಅನುಮೋದಿಸಲು ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ ಇವರ ಅಧ್ಯಕ್ಷೆಯಲ್ಲಿ ಮಂಡಳಿ ಸಭೆಯ ಓಟಿಎಸ್‌ಗೆ ಸಂಬಂಧಿಸಿದ ಉಪ ಸಮಿತಿಯ ರಚನೆಗೆ ಸರ್ಕಾರವು ಅನುಮೋದನೆಯನ್ನು ನೀಡಿದೆ. ಸದರಿ ಉಪ ಸಮಿತಿಯನ್ನು ಶೀಘ್ರದಲ್ಲೇ ರಚಿಸಲಾಗುವುದು. ಈ ಉಪ ಸಮಿತಿಯು ರಚನೆಗೊಂಡ ನಂತರದಲ್ಲಿ ಪ್ರತಿ ತಿಂಗಳಿನಲ್ಲಿ ಸಭೆ ಸೇರಿ ಆದಷ್ಟು ಓಟಿಎಸ್ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸತಕ್ಕದ್ದು.

3. ಓಟಿಎಸ್ ಅನುಮೋದನೆಗಳನ್ನು ಅನುಸರಣಾ ವರದಿಯೊಂದಿಗೆ ಹಾಗೂ ಪ್ರಸ್ತುತ ಓಟಿಎಸ್ ಅರ್ಜಿಗಳ ಸ್ಥಿತಿಗತಿಯ ಬಗ್ಗೆ ಮಂಡಳಿ ಸಭೆಯ ಮುಂದೆ ಮಂಡಿಸತಕ್ಕದ್ದು. ಈ ಮಂಡಳಿಯ ಸಭೆಯು ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ಸೇರಿ G ತೀರ್ಮಾನ ಸೂತ್ರದಡಿಯಲ್ಲಿ ಬರುವಂತಹ ಓಟಿಎಸ್ ಪ್ರಸ್ತಾವನೆಗಳನ್ನು ಇತ್ಯರ್ಥಗೊಳಿಸಬೇಕಾಗಿರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 266 ವೆಚ್ಚ.1–2019, ದಿನಾಂಕ: 22.01.2020 ಮತ್ತು ಸಚಿವ ಸಂಪುಟ ಸಭೆಯ ಪ್ರಕರಣ ಸಂಖ್ಯೆ:ಸಿ:115/2020, ದಿನಾಂಕ: 06/03/2020ರಂದು ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಾಪಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ,

ಇವರಿಗೆ:

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಹಕ್ಕುಗಳು) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ಬೆಂಗಳೂರು.

4. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಸಿ. ಖನಿಜಭವನ , ಬೆಂಗಳೂರು.
5. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಅಪರ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿ (**ಸಚಿವ ಸಂಪುಟ**) ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ(ವೆಚ್ಚ-1), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
9. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿ